‘ಹ್ಞೂಂ. ಮಳೆ ಕಡಮೆ. ಇಲ್ಲವೇ ಇಲ್ಲ. ಬಿದ್ದರೂ ನಾಕೈದು ಹನಿ. ನೆಲ ಹಳೆಯ ಚರ್ಮದ ಹಾಗೆ ಒಣಗಿ, ಕುಗ್ಗಿ, ಬಿರುಕು ಬಿಟ್ಟಿದೆ. ಆ ಬಿರುಕುಗಳನ್ನ ನೀರಿನ ದಾರಿ ಅಂತ ಕರೆಯುತ್ತಾರೆ ಇಲ್ಲಿನ ಜನ. ಮತ್ತೇನಿಲ್ಲ, ಅವು ಕಲ್ಲಿನಷ್ಟು ಗಟ್ಟಿಯಾಗಿರುವ ಮೊನಚು ತುದಿಯ ಮಣ್ಣ ಹೆಂಟೆಗಳು. ಕಾಲಿಗೆ ತಾಕಿದರೆ ಮುಳ್ಳು ನೆಲದ ಮೇಲೆ ನಡೆದಷ್ಟು ನೋವು. ಇಲ್ಲಿ ನೆಲ ಇರುವುದೇ ಹಾಗೆ.’

ಬಾಟಲಿಯ ತಳದಲ್ಲಿ ಬುರುಗು ಮಾತ್ರ ಉಳಿಸಿ ಬಿಯರ್ ಪೂರಾ ಕುಡಿದು ಮತ್ತೆ ಮಾತಾಡಿದ.

‘ಯಾವ ಥರ ನೋಡಿದರೂ ಲುವೀನಾ ದುಃಖದ ಊರು. ಈಗ ನೀನೇ ಅಲ್ಲಿಗೆ ಹೋಗತೀಯಲ್ಲ, ನನ್ನ ಮಾತಿನ ಅರ್ಥ ಆಗತದೆ. ದುಃಖ ಗೂಡು ಕಟ್ಟಿಕೊಂಡಿರುವ ಊರು ಅನ್ನತೇನೆ ನಾನು. ನಗು ಅನ್ನುವುದು ಅಲ್ಲಿ ಯಾರಿಗೂ ಗೊತ್ತೇ ಇಲ್ಲ. ಎಲ್ಲಾ ಮುಖಗಳೂ ಹುಟ್ಟುತ್ತಲೇ ಸೆಟೆದುಕೊಂಡ ಹಾಗೆ ಇವೆ. ನೀನು ಕಣ್ಣು ಬಿಟ್ಟು ನೋಡಿದರೆ ಬೀದಿಯ ಒಂದೊಂದು ತಿರುವಿನಲ್ಲೂ ದುಃಖ ಎದುರಿಗೆ ಬರುತ್ತದೆ. ಊರಲ್ಲಿ ಬೀಸುವ ಗಾಳಿ ದುಃಖವನ್ನು ಚದುರಿಸುತ್ತದೆ, ಯಾವತ್ತೂ ಹಾರಿಸಿಕೊಂಡು ಹೋಗುವುದಿಲ್ಲ. ದುಃಖ ಹುಟ್ಟಿದ್ದೇ ಅಲ್ಲಿ ಆ ಊರಲ್ಲಿ ಅನ್ನುವ ಹಾಗೆ ಅಲ್ಲೇ ಇದ್ದುಬಿಟ್ಟಿದೆ. ನೀನು ಬೇಕಾದರೆ ಅದನ್ನು ಮುಟ್ಟಿ ನೋಡಬಹುದು, ರುಚಿ ನೋಡಬಹುದು. ನಿನ್ನ ಮೇಲೆ ಒತ್ತುತ್ತ ಇರುತದೆ, ಅದುಮುತ್ತ ಇರುತದೆ, ಎದೆಯ ಗಾಯಕ್ಕೆ ಪೋಲ್ಟೀಸು ಕಟ್ಟಿದ ಹಾಗೆ ಇರುತದೆ.

‘...ಹುಣ್ಣಿಮೆಯ ದಿನಗಳಲ್ಲಿ ಲುವೀನಾ ಬೀದಿಗಳಲ್ಲಿ ಕರೀ ಕಂಬಳಿ ಎಳೆದುಕೊಂಡು ಅಲೆಯುವ ಗಾಳಿಯ ಆಕಾರ ಕಾಣುತದೆ ಅನ್ನುತ್ತಾರೆ ಅಲ್ಲಿನ ಜನ. ಆದರೆ ನನಗೆ ಮಾತ್ರ ಲುವೀನಾದ ಹುಣ್ಣಿಮೆಗಳಲ್ಲಿ ಹತಾಶೆಯ ಆಕಾರ ಮಾತ್ರ ಕಾಣುತಿತ್ತು... ಯಾವಾಗಲೂ.

‘ಬಿಯರ್ ಕುಡಿ ನೀನು. ಮುಟ್ಟೇ ಇಲ್ಲವಲ್ಲಾ, ಹಾಗೇ ಇದೆ. ಕುಡಿ. ಅಥವಾ ನಿನಗೆ ಬೆಚ್ಚಗಿರುವ ಬಿಯರ್ ಇಷ್ಟವಾಗುವುದಿಲ್ಲವೇನೋ. ಇಲ್ಲಿ ಬೇರೆ ಥರ ಬಿಯರ್ ಸಿಗುವುದಿಲ್ಲ. ಬೆಚ್ಚಗಿರುವ ಬಿಯರ್‌ಗೆ ರುಚಿ ಇರುವುದಿಲ್ಲ, ಗೊತ್ತು. ಕತ್ತೆಯ ಉಚ್ಚೆಯ ಹಾಗೆ ಇರತದೆ. ಇಲ್ಲಿಗೆ ಬರತೀಯಲ್ಲ. ಅಭ್ಯಾಸ ಆಗತದೆ ಬಿಡು. ಲುವೀನಾದಲ್ಲಿ ಇದೂ ಸಿಗಲ್ಲ. ಅಲ್ಲಿ ಏನಿದ್ದರೂ ಹೋಹಾಸ್ ಎಲೆಗಳನ್ನು ಹಾಕಿ ಮಾಡಿದ ಮೆಸ್ಕಾಲ್ ಹೆಂಡ ಮಾತ್ರ. ಎರಡು ಗುಟುಕು ಕುಡಿದರೆ ಸಾಕು, ಪೆಟ್ಟು ತಿಂದಾಗ ಆಗುವ ಹಾಗೆ ತಲೆ ಗಿರ್‌ರ್ ಅನ್ನತದೆ. ನೀನು ಬಿಯರ್ ಕುಡಿ ಈಗ, ಹೇಳತೇನೆ. ನನಗೆ ಎಚ್ಚರ ಇದೆ, ಏನು ಹೇಳತಾ ಇದೇನೆ ನನಗೆ ಗೊತ್ತು.’

ಹೊರಗೆ ನದಿಯ ಹೆಣಗಾಟ ಇನ್ನೂ ಕೇಳುತಿತ್ತು. ಗಾಳಿ ಸಣ್ಣಗೆ ಬೀಸುತಿತ್ತು. ಮಕ್ಕಳು ಆಡುತಿದ್ದರು. ಈಗಿನ್ನೂ ರಾತ್ರಿ ಶುರುವಾಗಿದೆ ಅನ್ನಿಸುತಿತ್ತು.

ಆ ಮನುಷ್ಯ ಮತ್ತೆ ಎದ್ದು ಬಾಗಿಲವರೆಗೂ ಹೋಗಿ ನೋಡಿ ಬಂದ.

ಈಗ ಮತ್ತೆ ಹೇಳತಾ ಇದಾನೆ:

‘ಇಲ್ಲಿ ಕೂತು ನೋಡುವುದು, ಜ್ಞಾಪಿಸಿಕೊಂಡು ಹೇಳುವುದು ಸುಲಭ. ಒಂದಕ್ಕೊಂದಕ್ಕೆ ಸಂಬಂಧ ಇರಲ್ಲ. ನನಗೆ ಅಂಥ ಕಷ್ಟ ಇಲ್ಲ. ಲುವೀನಾ ಬಗ್ಗೆ ಗೊತ್ತಿರುವುದನ್ನೇ ಹೇಳತೇನೆ. ಅಲ್ಲಿದ್ದೆ. ನನ್ನ ಬದುಕನ್ನ ಅಲ್ಲೇ ಬಿಟ್ಟು ಬಂದೆ... ನನ್ನ ಭ್ರಮೆಗಳನ್ನೆಲ್ಲ ಗಾಸಿಯಾಗದೆ ಸರಿಯಾಗೇ ಇದ್ದವು ಅಲ್ಲಿಗೆ ಹೋದಾಗ. ವಾಪಸ್ಸು ಬಂದಾಗ ಮುದುಕನಾಗಿ ಸವೆದು ಬಿಸಾಕುವ ಹಾಗಾಗಿದ್ದೆ. ಈಗ ನೀನು ಹೋಗತಾ ಇದೀಯ... ಸರಿ. ನಡೆದದ್ದೆಲ್ಲ ನನಗೆ ಮೊದಲಿಂದಲೂ ಜ್ಞಾಪಕ ಇದ್ದಹಾಗಿದೆ. ನಿನ್ನ ಜಾಗದಲ್ಲಿ ನಿಂತು ಯೋಚನೆ ಮಾಡಿ ಹೇಳತೇನೆ. ನೋಡು, ನಾನು ಮೊದಲು ಲುವೀನಾಕ್ಕೆ